# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/ 19 /2020-21 ದಿನಾಂಕ: 08.03.2021

**-:ದಿನಾಂಕ:06-03-2021 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:06.03.2021ರ ಶನಿವಾರ ಮಧ್ಯಾಹ್ನ 2.30 ಕ್ಕೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀಮತಿ.ಡಾ//ಕಲ್ಪನಾ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ | ಹಾಜರಿದ್ದರು. |
| 3. | ಶ್ರೀ.ನಾಗರಾಜ.ವಿ | ಹಿರಿಯ ಆರೋಗ್ಯ ಪರಿವೀಕ್ಷಕರು, | ಹಾಜರಿದ್ದರು. |
| 4. | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು, | ಹಾಜರಿದ್ದರು. |
| 5. | ಶ್ರೀ.ನವೀನ್ ಕುಮಾರ್ | ಎಇ. ಬಿ.ಡಬ್ಲ್ಯೂ.ಎಸ್,ಎಸ್.ಬಿ | ಹಾಜರಿದ್ದರು. |
| 6. | ಶ್ರೀ.ವಿರೇಶ್ | ಬೆಸ್ಕಾಂ | ಹಾಜರಿದ್ದರು. |
| 7. | ಶ್ರೀ.ಟಿ.ಆರ್.ಸತೀಶ್ | ಆರ್.ಡಬ್ಲ್ಯೂ.ಎ. ಅದಯ್ಯಪ್ಪನಗರ | ಹಾಜರಿದ್ದರು. |
| 8. | ಶ್ರೀ.ನರೇಂದ್ರ ಕುಮಾರ್ | ಹೂಡಿ | ಹಾಜರಿದ್ದರು. |
| 9. | ಶ್ರೀ.ಸಂಪಂಗಿರಾಮಯ್ಯ.ಎನ್ | (ಜು.ಇಂ) ಬೆ.ವಿ.ಕಂ. ಅಯ್ಯಪ್ಪನಗರ | ಹಾಜರಿದ್ದರು. |
| 10. | ಶ್ರೀ.ಪ್ರಸಾದ್.ಎಂ | ವಾರ್ಡ್ ಅಧ್ಯಕ್ಷರು ಸಾದರಮಂಗಳ | ಹಾಜರಿದ್ದರು. |
| 12. | ಶ್ರೀ.ಮಹೇಂದ್ರ ಪ್ರಸಾದ್ | ಆರ್.ಡಬ್ಲ್ಯೂ.ಎ. ಕೊಡಿಗೇಹಳ್ಳಿ | ಹಾಜರಿದ್ದರು. |
| 13. | ಶ್ರೀ.ಶ್ರೀನಿವಾಸ್ ರೆಡ್ಡಿ | ಹೂಡಿ | ಹಾಜರಿದ್ದರು. |
| 14. | ಶ್ರೀ.ಸುದರ್ಶನ್ | SWM Sup. | ಹಾಜರಿದ್ದರು. |
| 15. | ಶ್ರೀಮತಿ.ನಾಗರತ್ನ | SWM Sup. | ಹಾಜರಿದ್ದರು. |
| 16. | ಶ್ರೀ.ಆರೋಗ್ಯಸ್ವಾಮಿ | ಆರ್.ಡಬ್ಲ್ಯೂ.ಎ. ಭೈರತಿ | ಹಾಜರಿದ್ದರು. |
| 17. | ಶ್ರೀ.ವೆಂಕಟೇಶ್ ಕೆ ಆರ್ | ಮಾರ್ಷಲ್ ಹೂಡಿ | ಹಾಜರಿದ್ದರು. |
| 18. | ಶ್ರೀ.ಎಚ್.ಎಂ.ರಂಗನಾಥ್ | ಎಇ ಮೇಜರ್ ರೋಡ್ | ಹಾಜರಿದ್ದರು. |
| 19. | ಲೋಕೇಶ್ ರೆಡಿ | ಸಾದರಮಂಗಲ | ಹಾಜರಿದ್ದರು. |

| | | | |
|---|---|---|---|
| 20. | ಎಚ್.ಎಸ್.ಮಂಜುನಾಥ್ | ಹೂಡಿ | ಹಾಜರಿದ್ದರು. |
| 21. | ಆನಂದ ಆರ್ | ಬೆಳತ್ತೂರು | ಹಾಜರಿದ್ದರು. |
| 22. | ಅನುಲ್ಲಾ ದೀಯಾಸ್ | ಭೈರತಿ | ಹಾಜರಿದ್ದರು. |
| 23. | ಅಮೀತ್ ದೀಯಾಸ್ | ಭೈರತಿ | ಹಾಜರಿದ್ದರು. |

**ಸಭೆಯ ನಡುವಳಿಗಳು:-**

**ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ಅನುರಾದ ಆರ್‌ಡಬ್ಲ್ಯೂಎ ಬ್ಲೆಸಿಂಗ್ ಗಾರ್ಡ್‌ನ್ ಮುಖ್ಯ ರಸ್ತೆಯಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ 10ನೇ ಕ್ರಾಸ್, 9ನೇ ಕ್ರಾಸ್, 8ನೇ ಕ್ರಾಸ್‌ಗಳಲ್ಲಿ ಘನತ್ಯಾಜ್ಯ ಸಂಗ್ರಹಣೆ ಕಾರ್ಯ ಸಮರ್ಪಕವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆರೋಗ್ಯ ಸ್ವಾಮಿ ರವರು ತ್ಯಾಜ್ಯ ಸಂಗ್ರಹಣೆ ಆಟೋಗಳು ಮೈಕ್ ಅನೌನ್ಸ್‌ಮೆಂಟ್ ಮಾಡುತ್ತಿರುವುದಿಲ್ಲ ಎಂದು ತಿಳಿಸಿದರು.
- ಅಧ್ಯಕ್ಷರು ಸುದರ್ಶನ್ ಎಸ್.ಡಬ್ಲ್ಯೂ.ಎಂ (supervisor) ರವರಿಗೆ ಇನ್ನು ಮುಂದೆ ಸರಿಯಾಗಿ ಪ್ರತಿ ನಿತ್ಯ ಸಂಗ್ರಹಿಸಬೇಕೆಂದು ಸೂಚಿಸಿದರು.
- ಆನಂದ ಆರ್‌ಡಬ್ಲ್ಯೂಎ ಬೆಳತ್ತೂರು ರವರು ಯಲ್ಲಮ್ಮ ದೇವಸ್ಥಾನ ರಸ್ತೆಯಲ್ಲಿ ಬ್ಲಾಕ್ ಸ್ಪಾಟ್ ಇರುವುದನ್ನು ಪ್ರತಿನಿತ್ಯ ತೆರವುಗೊಳಿಸಲು ತಿಳಿಸಿದರು. ಅದರಂತೆ ಅಧ್ಯಕ್ಷರು ನಾಳೆಯೇ ಸರಿಪಡಿಸಲು ಸೂಚಿಸಿದರು.
- ಅಯ್ಯಪ್ಪನಗರ ರವರು ಸೊಳ್ಳೆಗಳ ಕಾಟ ಜಾಸ್ತಿಯಿರುತ್ತದೆ ಆದ್ದರಿಂದ Fagging ಮಾಡಲು ತಿಳಿಸಿದರು. ಬರುವ ಮಂಗಳವಾರ ನಮ್ಮ ವ್ಯಾಪ್ತಿಯಲ್ಲಿ Fagging ಕಾರ್ಯ ಮಾಡಲು ಇರುವುದರಿಂದ ಬರುವ ಮಂಗಳವಾರ Fagging ಮಾಡಿಸುವುದಾಗಿ ಹಿರಿಯ ಆರೋಗ್ಯ ನಿರೀಕ್ಷಕರು ತಿಳಿಸಿದರು.

**Animal Husbandry:-**

- ಅಧ್ಯಕ್ಷರು Animal Husbandry ಇಲಾಖೆಯಿಂದ ಯಾರು ಹಾಜರಿರದ ಕಾರಣ ಬರುವ 17.03.2021 ರಂದು ಮಧ್ಯಾಹ್ನ 3 ಗಂಟೆಗೆ ಈ ಇಲಾಖೆಯವರಿಂದ ಸಭೆಗೆ ಹಾಜರಿರಲು ಸೂಚಿಸಿದರು.
- ಆನಂದ ಆರ್‌ಡಬ್ಲ್ಯೂಎ ರವರು ಬೆಳತ್ತೂರು ಅಂಗನವಾಡಿ ಕಟ್ಟಡ ಬಾಡಿಗೆಯಿಂದ ನಡೆಯುತ್ತಿದ್ದು ಸುತ್ತಮುತ್ತಲು ಇರುವ ಸರ್ಕಾರಿ ಜಾಗದಲ್ಲಿ ನಿರ್ಮಿಸಲು ಕೊರಿದರು.
- ಮಂಜುನಾಥ ಹೂಡಿ ಆರ್‌ಡಬ್ಲ್ಯೂಎ ರವರು ಹೂಡಿ ಗ್ರಾಮದಲ್ಲಿರುವ ಪಾರ್ಕ್ ನಿರ್ಮಿಸಿ ಸುತ್ತಮುತ್ತಲು Fencing ಮಾಡಬೇಕು ಹಾಗೂ ಪಕ್ಕದಲ್ಲಿರುವ ಎಸ್‌ಡಬ್ಲ್ಯೂಡಿ ಗೆ Fencing ಮಾಡಬೇಕೆಂದು ಕೊರಿರುತ್ತಾರೆ.
- ಅಧ್ಯಕ್ಷರು ಸಂಬಂಧಿಸಿದಂತೆ ಈ ಕಾರ್ಯಕ್ಕೆ ಈಗಾಗಲೇ Proposal ಕಳುಹಿಸಲಾಗಿದ್ದು ನಂತರ ಕಾರ್ಯನಿರ್ವಹಿಸಲಾಗುವುದು ಎಂದು ತಿಳಿಸಿದರು ಹಾಗೂ ಅಧ್ಯಕ್ಷರು ಎಸ್‌ಡಬ್ಲ್ಯೂಡಿ ಗೆ ಸಂಬಂಧಿಸಿದಂತೆ ಇಇ ರವರಿಗೆ ಮಾತನಾಡಿ ಸರಿಪಡಿಸುವುದಾಗಿ ತಿಳಿಸಿದರು.
- ಆನಂದ ಆರ್‌ಡಬ್ಲ್ಯೂಎ ಬೆಳತ್ತೂರು ವ್ಯಾಪ್ತಿಯಲ್ಲಿ ಈಗಾಗಲೇ ಎಸ್‌ಡಬ್ಲ್ಯೂಡಿ ಕಾಂಪೌಂಡ್ ವಾಲ್ ಹೊಡೆದಿದದ್ದು ಅದನು, ಆದಷ್ಟು ಬೇಗ ಕಾಂಪೌಂಡ್ ಕಟ್ಟಬೇಕೆಂದು ತಿಳಿಸಿದರು.

- ಅಧ್ಯಕ್ಷರು ಎಸ್‌ಡಬ್ಲ್ಯುಡಿ, ಇಇ ರವರಿಗೆ ಪತ್ರ ಮುಖೇನ ಅವರಿಗೆ ತಿಳಿಸಿ ಸರಿಪಡಿಸಲು ಸೂಚಿಸಿದರು.
- ಮಾದೇಶ್ ಎಸ್‌ಡಬ್ಲ್ಯುಎ ರವರು ಸಾದರಮಂಗಲ ಸರ್ವೆನಂ 52 ರಲ್ಲಿ ರಸ್ತೆ ನಿರ್ಮಾಣಕ್ಕಾಗಿ ಕಾಮಗಾರಿ ಕೈಗೊಂಡಿದ್ದು ಅದನ್ನು ಪರಿಶೀಲಿಸಲು ಕೊರಿದರು.
- ಲೋಕೇಶ್ ರೆಡ್ಡಿ ಎಸ್‌ಡಬ್ಲ್ಯುಎ ರವರು ಸಾದರಮಂಗಲದಲ್ಲಿ ಸಿಮೆಂಟ್ ಗೋಡನ್‌ಗಳಿದ್ದು ಅವುಗಳಿಂದ ಹಲವಾರು ತೊಂದರೆಗಳಾಗುತ್ತಿರುತ್ತದೆಂದು ತಿಳಿಸಿದರು.
- ಅಧ್ಯಕ್ಷರು ಈ ಸಿಮೆಂಟ್ ಗೋಡನ್‌ಗಳಿಗೆ ನೋಟಿಸ್ ಜಾರಿ ಮಾಡಿ Pollution ಕಂಟ್ರೋಲ್ ಬೋರ್ಡ್ ಕಡತ ರವಾನಿಸಿ ನಂತರ Joint inspection ಮಾಡಿ ಕ್ರಮ ಕೈಗೊಳ್ಳಲು ಸೂಚಿಸಿದರು.

**ವಿದ್ಯುತ್:-**

- ಆನಂದ ಬೆಳತ್ತೂರು ರವರು 15 ಹೊಸ ಬೀದಿ ದೀಪಗಳು ಬೇಕೆಂದು ಕೊರಿರುತ್ತಾರೆ.
- ಅಧ್ಯಕ್ಷರು ಸದ್ಯಕ್ಕೆ ಟೆಂಡರ್ ಪ್ರಕ್ರಿಯೆ ಕಾರ್ಯ ಪ್ರಗತಿಯಲ್ಲಿದ್ದು ನಂತರ ಬೀದಿ ದೀಪಗಳನ್ನು ಹಾಕಲಾಗುವುದೆಂದು ಸೂಚಿಸಿದರು
- ಅನುರಾದ ಎಸ್‌ಡಬ್ಲ್ಯುಎ ರವರು ಭೈರತಿ ಬ್ಲೆಸಿಂಗ್ ಗಾರ್ಡನ್ ಮುಖ್ಯ ರಸ್ತೆಯಲ್ಲಿ ಹಾಗೂ 9ನೇ & 10ನೇ ಅಡ್ಡ ರಸ್ತೆಗಳಲ್ಲಿರುವ ಬೀದಿ ಕಂಬಗಳಲ್ಲಿ ಬೀದಿ ದೀಪಗಳಿರುವುದಿಲ್ಲ ಅದನ್ನು ಸರಿಪಡಿಸಲು ಕೊರಿದರು. ಅಧ್ಯಕ್ಷರು ಸಂಬಂಧಪಟ್ಟವರು ಆದಷ್ಟು ಬೇಗ ಕೆಲಸಮಾಡಲು ಸೂಚಿಸಿದರು.

**ಪೋಲಿಸ್ ಇಲಾಖೆ:-**

- ಬಾಬುರೆಡ್ಡಿ ಮತ್ತು ಸಾರ್ವಜನಿಕರು ಹೂಡಿ ಗ್ರಾಮದಲ್ಲಿರುವ ಐಟಿಪಿಎಲ್ ಮುಖ್ಯರಸ್ತೆಗೆ ಹೋಗುವ ರಸ್ತೆ ಮುಚ್ಚಲಾಗಿದ್ದು ಅದನ್ನು ತೆರವು ಮಾಡಲು ಕೊರಿರುತ್ತಾರೆ.
- ಅದರಂತೆ ಅಧ್ಯಕ್ಷರು ಈ ವಿಚಾರವಾಗಿ ಪೊಲೀಸ್ ಲಾ ಅಂಡ್ ಆರ್ಡರ್ ಮತ್ತು ಪೊಲೀಸ್ ಟ್ರಾಫೀಕ್ ರವರಿಗೆ ಪತ್ರಮುಖೇನ ಬರೆದು ತೆರವುಗೊಳಿಸಲು ಸೂಚಿಸಿದರು.

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

Covid-19 Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೊಡಲ್ ಅಧಿಕಾರಿ
ಡಾ//ಕಲ್ಪನಾ. ಹೂಡಿ–54
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ–54 ಹೂಡಿ
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ